# ವಚನ ಚಳುವಳಿ ಮತ್ತು ಮಹಿಳಾ ಸಮಾನತೆ

ಸಾವಿತ್ರಿ ಮಠ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ.ಪ್ರ.ದ. ಕಾಲೇಜು, ಮಹಾಗಾಂಟ ಕ್ರಾಸ್, ತಾ: ಕಮಲಾಪುರ, ಜಿ: ಕಲಬುರಗಿ.

DOI: https://doi.org/10.5281/zenodo.15504642

## ABSTRACT:

ಹನ್ನೆರಡನೆಯ ಶತಮಾನದಲ್ಲಿ ವಚನಗಳ ಮೂಲಕ ಸಾಮಾಜಿಕ ಚಿಂತನೆ, ವೈಚಾರಿಕತೆ, ಧಾರ್ಮಿಕ ಓರೆಕೋರೆಗಳ ವಿಶ್ಲೇಷಣೆ ಕಾಯಕ ಶ್ರದ್ಧೆಯೊಂದಿಗೆ ಮಹಿಳೆಯರಿಗೆ ಸ್ವಾತಂತ್ರ್ಯ ಸಮಾನತೆ ನೀಡಿ ಅವರಲ್ಲಿ ವಿಶ್ವಾಸವನ್ನು ಮೂಡಿಸಿದವರು ಶಿವಶರಣರು. ತಮ್ಮ ವಚನಗಳಲ್ಲಿ ಲಿಂಗಾತೀತ ನೆಲೆಯನ್ನು ಪುರಸ್ಕರಿಸಿ, ಲಿಂಗತಾರತಮ್ಯದ ಸಮಾಜದಲ್ಲಿ ವಿಚಾರ, ವಿಮರ್ಶೆ ಮಾಡಲು ಅವಕಾಶ ಮಾಡಿಕೊಟ್ಟಿದ್ದು ವಚನ ಚಳುವಳಿ. ಹೆಣ್ಣನ್ನು 'ಮಾಯೆ' ಎಂದು ಹೀಗಳೆಯುತ್ತಿದ್ದ ಪುರುಷ ಪ್ರಧಾನ ಮನೋಧೋರಣೆಗೆ ತಡೆಹಾಕಿ ಹೆಣ್ಣನ್ನು ಹತ್ತಿಕ್ಕುವ ಸಮಾಜದ ಕೌರ್ಯವನ್ನು ಖಂಡಿಸಿ ಸ್ತ್ರೀಸಂವೇದನೆಗೆ ಹೊಸ ಆಯಾಮವನ್ನು ತಂದುಕೊಟ್ಟವರು ವಚನಕಾರರು. ಇದರಿಂದ ಸಮಾಜದಲ್ಲಿ ಮಹಿಳೆಯರಿಗೆ ಸಾಕಷ್ಟು ಅವಕಾಶಗಳು ದೊರೆತು ಅನುಭವ ಮಂಟಪದಲ್ಲಿ ಪುರುಷರ ಸಮಾನವಾಗಿ ಚರ್ಚೆ ಮಾಡಿ ಸಮಾಜಕ್ಕೆ ಮಹಿಳೆಯರ ಕೊಡುಗೆ ಏನೆಂಬುದು ಅವರು ತೋರಿಸಲು ಸಾಧ್ಯವಾಯಿತು. ಈ ಸಂದರ್ಭದಲ್ಲಿ ಮಹಿಳೆ ಪುರುಷ ಸರಿಸಮಾನವಾಗಿ ಅನುಭವ ಮಂಟಪದ ಚರ್ಚೆಯಲ್ಲಿ ಭಾಗವಹಿಸುವ, ವಿಚಾರ ವಿಮರ್ಶೆ ಮಾಡುವ, ಕಾಯಕ ದಾಸೋಹ ಮಾಡುವ ಮುಂತಾದ ನೆಲೆಗಳಲ್ಲಿ, ಆಯಾಮಗಳಲ್ಲಿ ತನ್ನ ಅಸ್ತಿತ್ವ, ಅಸ್ಮಿತೆಯನ್ನು ಉಳಿಸಿಕೊಳ್ಳುವ ಸ್ವಾತಂತ್ರ್ಯ ಸಮಾನತೆಗೆ ಶರಣರು ಅವಕಾಶ ಕಲ್ಪಿಸಿಕೊಟ್ಟರು. ಪ್ರಸ್ತುತ ಲೇಖನದಲ್ಲಿ ವಚನ ಆಂದೋಲನದಲ್ಲಿ ಶಿವಶರಣರು ಮಹಿಳೆಗೆ ನೀಡಿದ ಪ್ರಾಮುಖ್ಯತೆಯನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

## KEYWORDS:

ಲಿಂಗಾತೀತ ನೆಲೆ, ವಚನಾಂದೋಲನ, ಸರ್ವಸಮಾನತೆ, ಸಮಾನತಾ ಪ್ರಜ್ಞೆ, ಗಂಡು-ಹೆಣ್ಣು, ಅಭೇದ ಸಂಸ್ಕೃತಿ.

ವಚನ ಚಳುವಳಿಯು ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ಭಾರತದಲ್ಲಿಯೇ ಅಭೂತಪೂರ್ವವಾದುದು. ಶತಮಾನಗಳಿಂದ ಅಸ್ಪೃಶ್ಯಳಾದ ಮಹಿಳೆಯನ್ನು ಮಾನವೀಯತೆ ದೃಷ್ಟಿಯಿಂದ ಕಂಡು ಸರಿಸಮಾನವಾದ ಸ್ಥಾನಮಾನಗಳನ್ನು ನೀಡಿದ್ದು ಶರಣರು. ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ವಚನ ಚಳುವಳಿ ಮಹಿಳಾ ವಿಮೋಚನೆಯ ದೃಷ್ಟಿಯಿಂದ ಇಡೀ ಜಗತ್ತಿಗೆ ಮಾದರಿಯಾಗಿದೆಯೆಂಬುದಕ್ಕೆ

ಅನೇಕ ಆಧಾರಗಳಿವೆ. ಲಿಂಗರಾಜಕಾರಣದಿಂದ ಶೋಷಣೆಗೆ ಒಳಪಟ್ಟ ಮಹಿಳೆಯು ಅನುಭವ ಮಂಟಪದಲ್ಲಿ ಸರ್ವಸಮಾನವಾಗಿ ನಿಂತು ತನ್ನ ನಿಲುವನ್ನು ಸ್ಪಷ್ಟಪಡಿಸುವಂತೆ ಆಗಿದ್ದು ವಚನ ಚಳುವಳಿಯಿಂದ. ಕೇವಲ ಅಡುಗೆ ಮನೆಗೆ ಸೀಮಿತವಾದ ಅವಳ ಧ್ವನಿ ಸಾಮಾಜಿಕ ತಾಣವಾದ ಅನುಭವ ಮಂಟಪದಲ್ಲಿ ಪ್ರತಿಧ್ವನಿಸುವಂತೆ ಆಯಿತು. ಅನುಭವ ಮಂಟಪದ ಚರ್ಚೆಯ ಮೂಲಕ ಸಾಮಾಜಿಕ ಮನೋಜಾಡ್ಯಗಳನ್ನು ಕಿತ್ತೊಗೆಯಲು ಪ್ರಯತ್ನ ಮಾಡಿದ್ದು ಈ ವಚನಾಂದೋಲನದಲ್ಲಿ ಎಂಬುದು ಗಮನಿಸಬೇಕಾದ ಸಂಗತಿ.

"ಆ ಕಾಲದ ಸಾಮಾಜಿಕ ಪರಿಸ್ಥಿತಿಯೂ ವಚನಕಾರರ ಆಂದೋಲನಕ್ಕೆ ಸಹಾಯಕಾರಿಯಾಗಿದ್ದಿತೆಂದು ಹೇಳಲು ಸಾಧ್ಯವಿದೆ" (ಎಂ. ಚಿದಾನಂದಮೂರ್ತಿ; ೨೦೧೮, ವಚನ ಸಾಹಿತ್ಯ; ಸಪ್ನ ಬುಕ್ ಹೌಸ್, ಪು. ಸಂ. ೨೯) ಹೀಗಾಗಿ ಶತಶತಮಾನಗಳಿಂದ ನಡೆದು ಬಂದ ಸಾಮಾಜಿಕ ವ್ಯವಸ್ಥೆಯನ್ನು ನೋಡಿದಾಗ ವರ್ಣ ವ್ಯವಸ್ಥೆಯಲ್ಲಿ ಅಸ್ಪೃಶ್ಯರಿಗೆ ಅನ್ಯಾಯವಾದರೆ; ವರ್ಗ ವ್ಯವಸ್ಥೆಯಲ್ಲಿ ಬಡವರಿಗೆ ಅನ್ಯಾಯವಾದರೆ; ಲಿಂಗ ರಾಜಕೀಯದಲ್ಲಿ ಎಲ್ಲ ಜಾತಿ, ವರ್ಗ, ವರ್ಣದ ಮಹಿಳೆಯರಿಗೆ ಅನ್ಯಾಯವಾಗಿದೆ, ಶೋಷಣೆಯಾಗಿದೆ. ಅದಕ್ಕೆ ಈ ಕೆಳಗಿನ ವಚನವೇ ಸಾಕ್ಷಿ–

**"ಅರಸನ ಮನೆಯಲ್ಲಿ ಅರಸಿಯಾಗುವುದಕ್ಕಿಂತ**
**ಭಕ್ತರ ಮನೆಯಲ್ಲಿ ತೊತ್ತಾಗಿರುವುದು ಲೇಸೆಂದು"**

ಹೇಳುತ್ತಾರೆ. ಅಂದರೆ ಅರಮನೆಯಲ್ಲಿರುವ ಅರಸಿಗೂ ಕೂಡ ಶೋಷಣೆ ತಪ್ಪಿರಲಿಲ್ಲ ಎಂಬುದು ಒಂದು ಕಡೆಯಾದರೆ, ಭಕ್ತರ ಅಂದರೆ ಶರಣರ ಮನೆಯಲ್ಲಿ ತೊತ್ತಾಗಿರುವುದು ಲೇಸೆನ್ನುವುದರ ಮೂಲಕ ಮಹಿಳೆಗೆ ಭಕ್ತರ ಮನೆಯಲ್ಲಿ ಸ್ವಾತಂತ್ರ್ಯ ಇತ್ತು ಎಂಬುದನ್ನು ಈ ಸಾಲುಗಳಿಂದ ತಿಳಿಯಬಹುದು. ಇದರಿಂದ ಮನಗಾಣುವುದೇನೆಂದರೆ ಹಿಂದೆ ಇದ್ದಂತಹ ಇಂತಹ ಮಹಿಳಾ ಶೋಷಣೆಗೆ ಕಡಿವಾಣ ಹಾಕಿದ ಶರಣರು ಅವಳಿಗೆ ಸರಿಸಮಾನವಾದ ಸ್ಥಾನಮಾನ ನೀಡಿದರು ಎಂದು ತಿಳಿಯುತ್ತದೆ.

**"ಎಮ್ಮ ತಾಯಿ ನಿಂಬಿಯವ್ವೆ ನೀರನೆರೆದುಂಬಳು**
**ಎಮ್ಮಯ್ಯ ಚೆನ್ನಯ್ಯ ರಾಯಕಂಪಣವ ಹೊರುವ**
**ಎಮ್ಮಕ್ಕ ಕಂಚಿಯಲಿ ಬಾಣಸವ ಮಾಡುವಳು**
**ಎಮಗೆ ಆರೂ ಇಲ್ಲವೆಂಬಿರಿ**
**ಎಮ್ಮ ಅಜ್ಜರ ಅಜ್ಜರು ಹಡೆದ ಭಕ್ತಿಯ ನಿಮ್ಮ ಕೈಯಲು**
**ಕೊಂಬೆ ಕೂಡಲಸಂಗಮದೇವಾ"**

ಎಂದು ಬಸವಣ್ಣ ಸರ್ವಸಮಾನತೆಯನ್ನು ಸಾರಿದ ನಾಯಕನಾಗಿ

ಆಂದೋಲನದ ಸಂಚಲನಕ್ಕೆ ಕಾರಣವಾದನು. ಅದೇ ರೀತಿ ಆದ್ಯ ವಚನಕಾರ ಎನಿಸಿಕೊಂಡ ಜೇಡರ ದಾಸಿಮಯ್ಯನು–

**"ಮೊಲೆ ಮುಡಿ ಬಂದೆಡೆ ಹೆಣ್ಣೆಂಬರು**
**ಗಡ್ಡ ಮೀಸೆ ಬಂದೆಡೆ ಗಂಡೆಂಬರು**
**ನಡುವೆ ಸುಳಿವಾತ್ಮನು**
**ಹೆಣ್ಣು ಅಲ್ಲ, ಗಂಡು ಅಲ್ಲ ಕಾಣ ರಾಮನಾಥ"**

ಎನ್ನುತ್ತಾನೆ. ಗಂಡು ಹೆಣ್ಣಿನ ವ್ಯತ್ಯಾಸಗಳು ಕೇವಲ ಭೌತಿಕ ಸ್ವರೂಪದವುಗಳು. ಈ ಬಗೆಯ ವ್ಯತ್ಯಾಸಗಳು ಬಾಹ್ಯ ಶರೀರಕ್ಕೂ ಆತ್ಮಕ್ಕೂ ಯಾವುದೇ ಸಂಬಂಧವಿಲ್ಲ. ಆತ್ಮಕ್ಕೆ ಗಂಡು ಹೆಣ್ಣು ಎಂಬ ಬೇಧವಿಲ್ಲ ಎಂದು ದಾಸಿಮಯ್ಯನ ಈ ವಚನ ತಿಳಿಸುತ್ತದೆ. ಅಂತೆಯೇ ಬೌದ್ಧಿಕ ವಿಚಾರಗಳಿಗೂ ವ್ಯತ್ಯಾಸವಿಲ್ಲ ಎಂಬುದನ್ನು ಈ ಕಾಲದಲ್ಲಿ ಮಹಿಳೆ ತೋರಿಸಿಕೊಟ್ಟಳು ಹಾಗೂ ಮತ್ತೊಂದು ವಚನದಲ್ಲಿ ದಾಸಿಮಯ್ಯ ಜ್ಞಾನಕ್ಕೂ ಲಿಂಗಬೇಧವಿಲ್ಲ ಎನ್ನುತ್ತಾನೆ.

**"ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ**
**ಸತಿಪತಿಗಳೊಂದಾಗದವನ ಭಕ್ತಿ**
**ಅಮೃತದೊಳು ವಿಷ ಬೆರತಂತೆ ಕಾಣಾ ರಾಮನಾಥಾ"**

ಎಂದು ಹೆಣ್ಣು ಗಂಡಿನ ಸರ್ವಸಮಾನತೆಯನ್ನು ಈ ವಚನದಲ್ಲಿ ಸಾರಿದ್ದಾನೆ. ಕೌಟುಂಬಿಕ ಸಮಾನತೆಯ ಮಹತ್ವವನ್ನು ತಿಳಿಸಿದ್ದಾನೆ. ಬಸವಣ್ಣ ಕೂಡ ತನ್ನ ಒಂದು ವಚನದಲ್ಲಿ–

**"ಲಿಂಗವ ಪೂಜಿಸಿ ಫಲವೇನಯ್ಯ**
**ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ?**
**ಲಿಂಗವ ಪೂಜಿಸಿ ಫಲವೇನಯ್ಯ**
**ಕೂಡಲ ಸಂಗಮದೇವರ ಪೂಜಿಸಿ**
**ನದಿಯೊಳಗೆ ನದಿ ಬೆರೆಸಿದಂತಾಗದನ್ನಕ್ಕ?"**

ಎಂದು ಸತಿಪತಿಗಳಲ್ಲಿ ಏಕೋಭಾವ ಇರಬೇಕು. ಗಂಡನಾದವನು ಸಮಾನತಾ ಪ್ರಜ್ಞೆಯೊಂದಿಗೆ ಬದುಕಬೇಕು. ಸತಿಯನ್ನು ಸಮಾನ ಪ್ರಜ್ಞೆಯಿಂದ ಕಾಣದವನು ದೇವರಿಗೆ ದೂರ ಆಗುವವನು ಎಂದು ಹೇಳುತ್ತಾ ಬದುಕಿನಲ್ಲಿ ಮಹಿಳೆಯ ಪ್ರಾಮುಖ್ಯತೆ, ಸಮಾನತೆಯ ಮಹತ್ವವನ್ನು ತಿಳಿಸಿದ್ದಾನೆ. ಹುಟ್ಟು ಕಾರಣವಾಗಿ ಬೇರೆಯಾಗಿ ತೋರುವ; ಆದರೆ ಹಸಿವು, ತೃಷೆ, ನಿದ್ರೆ, ಭಯ, ಮೈಥುನಾದಿ ಜೀವನಾವಶ್ಯಕ ಸಂಗತಿಗಳಲ್ಲಿ ಸಮಾನಸಕ್ತರಾಗಿರುವ ಜೀವಿಗಳು ಹೆಣ್ಣು ಮತ್ತು ಗಂಡು ಲಿಂಗಾಂಗ ಸಾಮರಸ್ಯದ ಪರಿಕಲ್ಪನೆಯಲ್ಲಿ ಒಂದೆಯಾಗಿದ್ದಾರೆ ಎಂದು ಈ ವಚನ

ತಿಳಿಸುತ್ತದೆ.

**"ಸತಿ ಭಕ್ತಿಯಾದಡೆ ಹೊಲೆಗಂಜಲಾಗದು**
**ಗಂಡ ಭಕ್ತನಾದಡೆ ಕುಲಕ್ಕಂಜಲಾಗದು**
**ಸತಿಪತಿ ಎಂಬ ಅಂಗಸುಹಿಂಗಿ**
**ಲಿಂಗವೇ ಪತಿಯಾದ ಬಳಿಕ**
**ಸತಿಗೆ ಪತಿಯುಂಟೆ ಪತಿಗೆ ಸತಿಯುಂಟೆ**
**ಪಾಲುಂಡು ಮೇಲುಂಬರೆ ಗುಹೇಶ್ವರ"**

**(ಅಲ್ಲಮನ ವ. ಚಂ. ೧೪೮)**

ಅಲ್ಲಮನ ಪ್ರಕಾರ ಸತಿಪತಿ ಇಬ್ಬರೂ ಸಮಾನರು ಅಂದರೆ ಗಂಡು ಹೆಣ್ಣಿನ ಬಗ್ಗೆ ಸಮಾನ ಎಂಬ ಭಾವ ಹೊಂದಿರಬೇಕು ಎಂಬುದು ಕಂಡುಬರುತ್ತದೆ. ಇಲ್ಲಿ ಗಂಡು ಹೆಣ್ಣು ಅಬೇಧ ಸಂಸ್ಕೃತಿ ಈ ವಚನದಲ್ಲಿ ಮಂಡಿತವಾಗಿರುವುದು ಗಮನಾರ್ಹವಾಗಿದೆ.

ಲಿಂಗಬೇಧಕ್ಕೆ ಗೊಗ್ಗವ್ವೆಯ ವಿಚಾರ ಅರ್ಥಪೂರ್ಣವಾದುದು. ಈ ಕೆಳಗಿನ ವಚನದಲ್ಲಿ ಗೊಗ್ಗವ್ವೆ ಪುರುಷರ ಅಸ್ತಿತ್ವವನ್ನು ಪ್ರಶ್ನಿಸಿ ಸಮಾಜಕ್ಕೆ ಸವಾಲು ಹಾಕುತ್ತಾಳೆ.

**"ಗಂಡು ಮೋಹಿಸಿ ಹೆಣ್ಣ ಹಿಡಿದಡೆ**
**ಅದು ಒಬ್ಬರ ಒಡವೆ ಎಂದರಿಯಬೇಕು**
**ಹೆಣ್ಣು ಮೋಹಿಸಿ ಗಂಡ ಕೈಹಿಡಿದಡೆ**
**ಉತ್ತರವಾವುದೆಂದರಿಯಬೇಕು? "**

ಎಂದು ಪ್ರಶ್ನಿಸುವ ಗೊಗ್ಗವ್ವೆ ಸ್ತ್ರೀಯರಿಗೂ ಪುರುಷರಿಗೂ ಸಮಾನ ಅಸ್ತಿತ್ವವಿದೆ ಎಂಬುದನ್ನು ಸಮಾಜಕ್ಕೆ ಮನಗಾಣಿಸುತ್ತಾಳೆ. ಗಂಡು ಹೆಣ್ಣನ್ನು ಮೋಹಿಸುವ ಮೂಲಕ ಅವಳನ್ನು ತನ್ನ ಸ್ವತ್ತಾಗಿಸಿಕೊಳ್ಳುವನು. ಆದರೆ ಅದೇ 'ಹೆಣ್ಣು ಮೋಹಿಸಿ ಗಂಡ ಕೈಹಿಡಿದಡೆ ಉತ್ತರವಾವುದಯ್ಯ' ಎನ್ನುವಲ್ಲಿ ಇದು ಹೆಣ್ಮಕ್ಕಳಿಗೆ ಸಂಬಂಧಿಸಿದ ಆಲೋಚನೆಯಾಗುವುದು. ಆಗ ಅದು ಹೇಗೆಂದು ಉತ್ತರಿಸುವುದು ಎಂದು ಗೊಗ್ಗವ್ವೆ ಕೇಳುತ್ತಾಳೆ.

ಶಿವಶರಣರು ವಚನ ಸಾಹಿತ್ಯದಲ್ಲಿ ಸ್ತ್ರೀ ಪುರುಷರ ನಡುವೆ ಇರುವ ಅಸಮಾನತೆಯ ಬೇಧಭಾವವನ್ನು ಅಳಿಸಿ ಹಾಕಿ ಸರ್ವಸಮಾನತೆಯನ್ನು ಸಾರಿದ ಮಹಾನ್ ಚೇತನರು. ಕಾಯಕಜೀವಿಗಳ ಸಾಮಾಜಿಕ ಹೋರಾಟವಾದ ವಚನ ಚಳುವಳಿಯಲ್ಲಿ ಮಹಿಳಾ ಸಮಾನತೆಯ ಆಶಯಗಳು ಅಡಕವಾಗಿದ್ದವು ಎಂಬುದಕ್ಕೆ ಈ ಮೇಲಿನ ವಚನಗಳ ಮೂಲಕ ಗುರುತಿಸಬಹುದಾಗಿದೆ. ಸಾಮಾಜಿಕ ಆಂದೋಲನವೆಂದೇ ಕರೆಸಿಕೊಂಡ ವಚನಕ್ರಾಂತಿಯಲ್ಲಿ ಮಹಿಳೆಯನ್ನು ಪ್ರತ್ಯೇಕಿಸಿ

ನೋಡದೆ ಕ್ರಾಂತಿಯ ಮುಖ್ಯ ಘಟ್ಟವೆಂದು ಪರಿಗಣಿಸಿ ಮಹಿಳಾ ಸಮಾನತೆಯ ಆಶಯಗಳನ್ನು ಚಿಂತಿಸುವ ಸಂಸ್ಕೃತಿ ಸೇರ್ಪಡೆಗೊಳಿಸಿದರು. ಹೀಗಾಗಿ ವಚನ ಚಳುವಳಿಯಲ್ಲಿ ಮಹಿಳಾ ಸಮಾನತಾ ಚಳುವಳಿ ಪ್ರಾಮುಖ್ಯತೆ ಪಡೆದುಕೊಂಡಿತು. ಜೊತೆಗೆ ಶ್ರಮಸಂಸ್ಕೃತಿ ರೂಪುಗೊಳ್ಳುವುದು ಹೆಣ್ಣಿನ ಶ್ರಮದಿಂದ ಎಂಬುದನ್ನು ವಚನಕಾರರು ತೋರಿಸಿಕೊಟ್ಟರು.

ಹನ್ನೆರಡನೆಯ ಶತಮಾನದಲ್ಲಿ ಶರಣರು ಧಾರ್ಮಿಕ ಬದಲಾವಣೆ ಮೂಲಕ ಸಮಾಜದ ಪರಿವರ್ತನೆಗೆ ಪ್ರಯತ್ನಿಸಿದರು. ವಚನಗಳ ಮೂಲಕ ಸಾಹಿತ್ಯಿಕ ಆಂದೋಲನವನ್ನು ರೂಪಿಸಿದರು. ಹೀಗಾಗಿ ಸ್ತ್ರಿಯರಿಗೆ ಸಮಾನ ಅವಕಾಶ ದೊರೆತು ಮುಕ್ತ ಅಭಿವ್ಯಕ್ತಿಗೆ ಕಾರಣವಾಗಿ ವಚನಗಳ ಮೂಲಕ ಮೊದಲ ಬಾರಿಗೆ ಮಹಿಳೆಯರು ಸಾಹಿತ್ಯ ರಚನೆ ಮಾಡುವ ಅವಕಾಶ ದೊರಕಿಸಿಕೊಂಡರು. ಮಹಿಳೆಯರೂ ಸಾಹಿತ್ಯ ಸೃಷ್ಟಿ ಮಾಡಬಲ್ಲರು ಎಂಬುದಕ್ಕೆ ಹನ್ನೆರಡನೆಯ ಶತಮಾನದ ಶರಣರು ಸಾಬೀತುಪಡಿಸಿದರು. ಮೊದಲ ಬಾರಿಗೆ ಮಹಿಳೆಯರೂ ಸಾಂಸ್ಕೃತಿಕ ಬದಲಾವಣೆಗೆ ಸ್ಪಂದಿಸಲು ಸಾಧ್ಯವಾಯಿತು. ಹೀಗಾಗಿ ಸಾಹಿತ್ಯದಲ್ಲಿ ಮಹಿಳೆ ಸ್ವತಂತ್ರವಾಗಿ ವಚನಗಳನ್ನು ರಚಿಸಿ ತನ್ನ ಅಸ್ಮಿತೆಯನ್ನು ಗುರುತಿಸಿಕೊಳ್ಳಲು ಸಾಧ್ಯವಾಯಿತು. ಶಿವಶರಣರು ನೀಡಿದ ಸಮಾನವಕಾಶದಿಂದ ಸ್ತ್ರೀಯರು ಸಭೆಯಲ್ಲಿ ಭಾಗವಹಿಸಿ, ತತ್ವ, ಸಾಹಿತ್ಯ, ವಿಚಾರಗಳ ಚಿಂತನೆಯಲ್ಲಿ ತೊಡಗಿಸಿಕೊಂಡರು. ಹನ್ನೆರಡನೆಯ ಶತಮಾನದ ವಚನ ಚಳುವಳಿಯಿಂದ ಉಂಟಾದ ಈ ಬದಲಾವಣೆ ಮಹಿಳಾ ವಿಮೋಚನೆಯ ದೃಷ್ಟಿಯಿಂದ ಇಡೀ ಜಗತ್ತಿಗೆ ಮಾದರಿಯಾಯಿತು ಎಂದು ಹೇಳಬಹುದು.

ಹನ್ನೆರಡನೆಯ ಶತಮಾನದಲ್ಲಿ ವಚನಕ್ರಾಂತಿಯ ಮೂಲಕ ಹಿಂದೆ ಇದ್ದ ಎಲ್ಲಾ ರೀತಿಯ ಸ್ತ್ರೀಪುರುಷ ಬೇಧಭಾವಗಳನ್ನು ಶರಣರು ತಿರಸ್ಕರಿಸಿದರು. ಸ್ತ್ರೀಪುರುಷರ ಮಧ್ಯ ಸರ್ವವಿಧದ ಸಮಾನತೆಯನ್ನು ಸಾರಿದರು. ಹೆಣ್ಣು ಮಾಯೆ ಎಂಬುದನ್ನು ಅಲ್ಲಗಳೆದರು. ಎಲ್ಲಾ ಕ್ಷೇತ್ರಗಳಲ್ಲಿ ಸ್ತ್ರೀಯರಿಗೆ ಸಮಾನವಾದ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟರು ಮಹಿಳೆಯರಿಗೆ ಶಿಕ್ಷಣ ನೀಡುವ ಮೂಲಕ ಸಾಹಿತ್ಯ ರಚನೆಗೆ ಅವಕಾಶ ಮಾಡಿಕೊಟ್ಟರು. ಇದೆಲ್ಲದರ ಪರಿಣಾಮವಾಗಿ ಸಮಾಜದಲ್ಲಿ ಮಹಿಳೆಯ ಗೌರವಕ್ಕೆ, ಸರಿಸಮಾನವಾದ ಸ್ಥಿತಿಗತಿಗಳ ಅಭಿವೃದ್ಧಿಗೆ ವಚನ ಚಳುವಳಿ ಕಾರಣವಾಯಿತು. ಸಮಾಜದೊಳಗಿನ ಅನಿಷ್ಟ ಪದ್ಧತಿಗಳು, ಅಸಮಾನತೆಗೆ ಒಳಗಾದ ಹೆಣ್ಣನ್ನು ವೈಚಾರಿಕ ಜಾಗೃತಿಯ ಮೂಲಕ ಸಮಾಜದ ಮುಖ್ಯವಾಹಿನಿಗೆ ತಂದದ್ದು ವಚನ ಚಳುವಳಿ ಎನ್ನುವುದರಲ್ಲಿ ಸಂಶಯವಿಲ್ಲ. ಶರಣರ ದೃಷ್ಟಿಯಲ್ಲಿ ಭಕ್ತ ಭವಿಯದು ಒಂದೇ ಕುಲ ಎನ್ನುವಂತೆ ಹೆಣ್ಣು ಗಂಡುಗಳಲ್ಲೂ ಭೇದವಿರಲಿಲ್ಲ. ಈ ನಿಟ್ಟಿನಲ್ಲಿ ಸ್ತ್ರೀ ಸಮಾನತೆಗೆ ಶರಣರ ಕೊಡುಗೆ ಮಹತ್ತರವಾದುದು.

**ಪರಾಮರ್ಶನ ಗ್ರಂಥಗಳು:**


1. ಅರುಣಕುಮಾರಿ ಬಿ.ಎನ್. (ಸಂ), (೨೦೨೦), ಕನ್ನಡ ಮಹಿಳಾ ಸಾಹಿತ್ಯ ಅಸ್ಮಿತೆ, ಸುವ್ವಿ ಪಬ್ಲಿಕೇಷನ್, ಶಿಕಾರಿಪುರ.
2. ಬಸವರಾಜ ಎವಲೆ & ಕಲ್ಯಾಣರಾವ ಜಿ. ಪಾಟೀಲ (ಸಂ), (೨೦೨೩), ವಚನ ಸಾಹಿತ್ಯ ತಾತ್ವಿಕ ನೆಲೆಗಳು, ಎಸ್.ಎಸ್.ಕೆ. ಬಸವೇಶ್ವರ ಮಹಾವಿದ್ಯಾಲಯ ಬಸವಕಲ್ಯಾಣ, ಬೀದರ.
3. ಚಿದಾನಂದಮೂರ್ತಿ ಎಂ., (೨೦೧೮), ವಚನ ಸಾಹಿತ್ಯ, ಸಪ್ನ ಬುಕ್ ಹೌಸ್, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.